ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ:17:ಹೆಚ್.ಆರ್.ಎಂ.ಎಸ್:2018-19:ಸೇವಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,
ಬೆಂಗಳೂರು, ದಿನಾಂಕ:12.07.2018

ಇವರಿಗೆ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ),
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಮಾನ್ಯರೆ,

ವಿಷಯ: 2018ರ ಪರಿಷ್ಕೃತ ವೇತನ ಶ್ರೇಣಿಯ ವೇತನ ನಿಗದೀಕರಣದಲ್ಲಿ ಉಂಟಾಗಿರುವ ಸಮಸ್ಯೆಯ ಬಗ್ಗೆ

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ:06:ಎಸ್.ಆರ್.ಪಿ:2018, ದಿನಾಂಕ:19.04.2018

** ** **

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಅಟೆಂಡರ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೆಲವು ಸಿಬ್ಬಂದಿಗಳ ಮೂಲ ವೇತನವು ರೂ.19,650/-ಗಳಾಗಿದ್ದು, ಇವರ ವೇತನವನ್ನು ಪರಿಷ್ಕೃತ ವೇತನ ಶ್ರೇಣಿಯನ್ನು ಮಂಜೂರುಗೊಳಿಸುವ ಸಂಬಂಧ ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ಅಳವಡಿಸುವ ಸಂದರ್ಭದಲ್ಲಿ ತಂತ್ರಾಂಶದಲ್ಲಿ ಈ ಕೆಳಕಂಡಂತೆ ಸಂದೇಶವನ್ನು ನೀಡಿರುತ್ತದೆ.

**Fitment for existing emoluments{Existing pay as on 1/7/2017 + 45.75% DA + PP + Additional Increment + Special Allowance} is not available in column(1) of Fourth Schedule of Notification No.FD:06:SRP:2018, Dated:19th April 2018. Please contact Finance Department for the fitment amount**

ಸರ್ಕಾರದ ಅಧಿಸೂಚನೆ ಸಂಖ್ಯೆ:ಎಫ್.ಡಿ:06:ಎಸ್.ಆರ್.ಪಿ:2018, ದಿನಾಂಕ:19.04.2018ರಲ್ಲಿ ಹೊರಡಿಸಿರುವ ಕರ್ನಾಟಕ ನಾಗರೀಕ ಸೇವಾ(ಪರಿಷ್ಕೃತ ವೇತನ) ನಿಯಮಗಳು 2018ರ ನಿಯಮ(7)(4)ರಲ್ಲಿ "ಸರ್ಕಾರಿ ನೌಕರನೊಬ್ಬನ 'ಮೂಲ ವೇತನವು' ನಾಲ್ಕನೇ ಅನುಸೂಚಿಯ(1)ನೇ ಅಂಕಣದಲ್ಲಿ ಕಂಡುಬರದಿದ್ದಲ್ಲಿ, ಅಂಥ ಪ್ರಕರಣವನ್ನು ಆದೇಶಗಳಿಗಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು" ಎಂದು ತಿಳಿಸಲಾಗಿರುತ್ತದೆ.

ಆದಕಾರಣ ಮೇಲ್ಕಂಡ ಪ್ರಕರಣಗಳಲ್ಲಿ 2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನವನ್ನು ನಿಗಧಿಗೊಳಿಸುವ ಕುರಿತು ಸರ್ಕಾರದ ಮಾರ್ಗದರ್ಶನದೊಂದಿಗೆ ಆದೇಶವನ್ನು ಹೊರಡಿಸಲು ಕೋರಲಾಗಿದೆ.

(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ತಮ್ಮ ವಿಶ್ವಾಸಿ,

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

ಪ್ರತಿ:

1) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಬೆಂಗಳೂರು, ಮಂಗಳೂರು, ಮೈಸೂರು, ಕಲಬುರಗಿ, ಧಾರವಾಡ ಮತ್ತು ಮೈಸೂರು(ತಮ್ಮ ಕಛೇರಿ ವ್ಯಾಪ್ತಿಯ ಕಾಲೇಜುಗಳಲ್ಲಿ ಸಮಾನಂತರ ಪ್ರಕರಣಗಳು ಇದ್ದಲ್ಲಿ, ಈ ಕಛೇರಿಯಿಂದ ಸರ್ಕಾರದಿಂದ ಸ್ಪಷ್ಟೀಕರಣ ಕೋರಿರುವ ಬಗೆಗಿನ ಮಾಹಿತಿಯನ್ನು ಪರಿಚಲಿಸಲು ಸೂಚಿಸಿದೆ)
2) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು(ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ)
3) ಕಛೇರಿ ಪ್ರತಿ